
ತಮಿಳುನಾಡಿನ ನಾಯನಾರ್ ಸಂತರು – ೯


# ಸುಂದರಮೂರ್ತಿ ನಾಯನಾರ್

ಕಥೆ : ಪರುತ್ತಿಯಾರ್ ಕೆ. ಸಂತಾನರಾಮನ್ ಚಿತ್ರ : ಶಂಕರ್


1 ಶಿವನು ಸುಂದರಮೂರ್ತಿ ನಾಯನಾರ್ ಅವರೊಂದಿಗೆ ಸ್ನೇಹಿತನಂತೆ ಸಂಚರಿಸುತ್ತ ಅನೇಕ ಪವಾಡಗಳನ್ನು ಮಾಡಿದನು. ಒಂದು ಸಲ ಸುಂದರರು ಚೋಳ ದೇಶದ ಪುಣ್ಯಕ್ಷೇತ್ರವಾದ ತಿರುಕ್ಕಾವೂರಿಗೆ ಹೋಗುತ್ತಿದ್ದರು. ದಾರಿಯಲ್ಲಿ ....







5 ಸುಂದರರು ಮತ್ತು ಉಳಿದ ಭಕ್ತರೆಲ್ಲ ಆ ಛತ್ರದಲ್ಲಿ ಊಟಕ್ಕೆ ಕುಳಿತರು. ವೃದ್ಧ ಅವರಿಗೆಲ್ಲ ಬಡಿಸಿದ.





6





ಸುಂದರರು ಹಾಗೂ ಉಳಿದ ಭಕ್ತರು ವಿಶ್ರಾಂತಿ ಮುಗಿಸಿದ ಬಳಿಕ ಬಂದು ನೋಡುತ್ತಾರೆ, ಅವರಿಗೆ ಊಟ ಬಡಿಸಿದ ವೃದ್ಧ ಮಾಯವಾಗಿದ್ದ! ಆ ಛತ್ರವೂ ಕಣ್ಮರೆಯಾಗಿತ್ತು. ಆ ವೃದ್ಧ ನಿಜವಾಗಿಯೂ ಯಾರೆಂದು ಸುಂದರರಿಗೆ ಆ ಕ್ಷಣವೇ ಅರ್ಥವಾಯಿತು.

7




8 ಇನ್ನೊಂದು ಬಾರಿ ತೊಂಡಮಂಡಲದ ತಿರುಕಾಚಿಯೂರ್ ಎಂಬ ಪುಣ್ಯಕ್ಷೇತ್ರದ ದರ್ಶನ ಪಡೆದು ಸುಂದರರು ಮರಳುತ್ತಿದ್ದರು. ಆಗ ಅವರಿಗೆಲ್ಲ ಹಸಿವೆ ಸಹಿಸಲಾಗದಷ್ಟು ಉಂಟಾಗಿತ್ತು . ಅಲ್ಲೂ ಒಬ್ಬ ವೃದ್ಧ ಅವರಿಗೆ ಕಾಣಿಸಿಕೊಂಡ.




9
ಸ್ವಾಮಿ, ನೀವು ತುಂಬಾ ಹಸಿವೆ, ಆಯಾಸಗಳಿಂದ ಕಂಗೆಟ್ಟಿದ್ದೀರಿ. ದಯವಿಟ್ಟು ಸ್ವಲ್ಪ ತಾಳಿ. ನಾನು ನಿಮಗೆ ಹತ್ತಿರದ ಮನೆಗಳಿಂದ ಊಟ ತಂದು ಕೊಡುತ್ತೇನೆ.
ಆಗಲಿ, ಸ್ವಾಮಿ. ನಾವಿಲ್ಲೇ ಕಾಯುತ್ತೇವೆ.
10
ಆ ವೃದ್ಧನು ಭಿಕ್ಷಾಪಾತ್ರೆಯೊಂದಿಗೆ ಸಮೀಪದ ಮನೆಗಳಿಗೆ ಹೋಗಿ, ಭಿಕ್ಷೆಯನ್ನು ಸಂಗ್ರಹಿಸಿ ತಂದ.
11
ಸ್ನೇಹಿತರೇ, ಹೊಟ್ಟೆ ತುಂಬ ಊಟ ಮಾಡಿ.
ಸ್ವಾಮಿ, ಸರಿಯಾದ ಸಮಯಕ್ಕೆ ನೀವು ನಮಗೆ ಊಟ ಒದಗಿಸಿದ್ದೀರಿ. ತುಂಬಾ ಧನ್ಯವಾದಗಳು. ನೀವು ಯಾರು ಎಂದು ಕೇಳೋಣವೇ?
ಆ ಕ್ಷಣದಲ್ಲೇ ಆ ವೃದ್ಧ ಮಾಯವಾದ. ಈಗ ಕೂಡ ಸುಂದರರಿಗೆ ಅದು ಯಾರೆಂದು ಅರ್ಥವಾಯಿತು.
12
ನಮಃ ಶಿವಾಯ! ನಮಃ ಶಿವಾಯ!
ದೇವರೇ, ಕರುಣಾಸಾಗರನೇ, ಮತ್ತೊಮ್ಮೆ ನೀನು ನಮಗೆ ಆಹಾರ ನೀಡಿ ಕೃಪೆಗೈದಿದ್ದೀಯಾ. ಆದರೆ, ನಮಗೆ ಅದು ನೀನೆಂದು ಗೊತ್ತಾಗಲೇ ಇಲ್ಲವಲ್ಲ!

13 ತಿರುವಾರೂರಿನ ಬಳಿ ಕುಂಡೈಯೂರು ಎಂಬ ಒಂದು ಸಣ್ಣ ಗ್ರಾಮವಿತ್ತು. ಸುಂದರರು ಒಂದು ಸಲ ತಿರುವಾರೂರಿನಲ್ಲಿ ನೆಲೆಸಿದ್ದರು. ಆಗ ಕುಂಡೈಯೂರು ಗ್ರಾಮದ ಜಮೀನ್ದಾರನು ಬಹಳ ದೊಡ್ಡ ಪ್ರಮಾಣದಲ್ಲಿ ಅಕ್ಕಿ, ಬೇಳೆ ಇವನ್ನೆಲ್ಲ ದಾನ ಮಾಡುತ್ತಿದ್ದ. ಒಂದು ಬಾರಿ ಅಲ್ಲಿ ದುರ್ಭಿಕ್ಷ ಬಂದು, ಅವನಿಗೆ ದಾನ ಮಾಡಲು ಸಾಧ್ಯವಾಗಲಿಲ್ಲ. ಆಗ ಸಾಕ್ಷಾತ್ ಶಿವನೇ ಇಡೀ ಕುಂಡೈಯೂರಿನಲ್ಲಿ ಭತ್ತವನ್ನು ತುಂಬಿ, ಭಕ್ತರ ಸಂಕಟವನ್ನು ನಿವಾರಿಸಿದ. ಕೂಡಲೇ ಆ ಜಮೀನ್ದಾರನು ಸುಂದರರ ಬಳಿಗೆ ಬಂದ.




15 ಶಿವನ ಗಣಗಳು ಭತ್ತವನ್ನು ತಿರುವಾರೂರಿಗೆ ಸಾಗಿಸಿ, ಅದನ್ನು ಸುಂದರರ ಪತ್ನಿ ಪರವೈನಾಚಿಯ ಮನೆಯಿದ್ದ ಬೀದಿಯಲ್ಲೆಲ್ಲ ತುಂಬಿದವು. ಅದು ಶಿವನ ಕೃಪೆಯಿಂದಲೇ ನಡೆಯಿತೆಂದು ಆಕೆಗೆ ಅರ್ಥವಾಯಿತು.







18 ''ಶಿವನ ಸೇವೆ ಮಾಡಬಯಸುವವರು ಮೊದಲು ಭಗವಂತನ ಸೃಷ್ಟಿಯಾದ ಎಲ್ಲ ಜೀವಿಗಳ ಸೇವೆ ಮಾಡಬೇಕು.'' — ಸ್ವಾಮಿ ವಿವೇಕಾನಂದ

